# ಭಾರತಕ್ಕೆ ಯೂರೋಪಿಯನ್ನರ ಆಗಮನ

## ಆರಂಭದಲ್ಲಿ (ಪ್ರಾಚೀನ ಕಾಲದಲ್ಲಿ ) ಭಾರತದೊಂದಿಗೆ ಯೂರೋಪಿಯನ್ನರ ವ್ಯಾಪಾರ ಹೇಗೆ ನಡೆಯುತ್ತಿತ್ತು?




ಪ್ರಾಚೀನ ಕಾಲದಿಂದಲೂ ಭಾರತ ಮತ್ತು ಯೂರೋಪಿನ ಮಧ್ಯೆ ವಾಣಿಜ್ಯ ಸಂಬಂಧವಿತ್ತು.

- ಭಾರತದ ಸಾಂಬಾರ ಪದಾರ್ಥ ಗಳಾದ ಮೆಣಸು ದಾಲ್ಚಿನ್ನಿ, ಏಲಕ್ಕಿ ಶುಂಠಿ ಇವುಗಳಿಗೆ ಯೂರೋಪಿಯ ನ್ನರಿಂದ ಯಥೇಚ್ಚ ಬೇಡಿಕೆ ಇತ್ತು. ಈ ವಸ್ತುಗಳನ್ನು ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡಲಾಗುತ್ತಿತ್ತು.
- ಮಧ್ಯಯುಗದಲ್ಲಿ ಪರ್ಶಿಯನ್
- ಕೊಲ್ಲಿ, ಕೆಂಪುಸಮುದ್ರ ಮತ್ತು
- ಭಾರತದ ವಾಯುವ್ಯ ಪ್ರದೇಶಗಳ
- ಮೂಲಕ ವ್ಯಾಪಾರ ನಡೆಯುತ್ತಿತ್ತು.






- ಅರಬ್ಬರು ಏಷ್ಯಾದ ವ್ಯಾಪಾರವನ್ನು ನಡೆಸುತ್ತಿದ್ದರು.
- ಮೆಡಿಟೇರಿಯನ್ ಹಾಗೂ ಯುರೋಪಿನ ವ್ಯಾಪಾರವು ಇಟಲಿಯ ಏಕಸ್ವಾಮ್ಯತೆಗೆ ಒಳಪಟ್ಟಿತ್ತು. ಇಟಲಿಯು ವೆನಿಸ್,ಜಿನೋವಾ, ಮಿಲಾನ ಫ್ಲಾರೆನ್ಸ್ ಮೂಲಕ ಭಾರತದ ಸಾಂಬಾರ ಪದಾರ್ಥಗಳನ್ನು ವಿತರಣೆ ಮಾಡುವ ಕೇಂದ್ರವಾಯಿತು.
- ಪಶ್ಚಿಮ ಯುರೋಪಿನ ದೇಶಗಳು ಅಟ್ಲಾಂಟಿಕ್ ಸಾಗರದ ಮೂಲಕ ಒಂದು ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕುವ ಪ್ರಯತ್ನದಲ್ಲಿದ್ದವು
- ಸ್ಪೈನ್ ಹಾಗೂ ಪೋರ್ಚುಗಲ್‌ಗಳು ಇದಕ್ಕೆ ಮುನ್ನುಡಿ ಬರೆದವು.

“ ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ□ ಈ ಹೇಳಿಕೆಯನ್ನು ಸಮರ್ಥಿಸಿ.

( ಭಾರತಕ್ಕೆ ಸಮುದ್ರಯಾನ ಕಂಡುಹಿಡಿಯಲು ಪ್ರೇರಣೆ ನೀಡಿದ ಅಂಶಗಳಾವುವು?)




1. ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಸಿಡಿಮದ್ದು, ನೌಕಾ ಉಪಕರಣಗಳು, ಭೂಪಟ ಇತ್ಯಾದಿಗಳು ನಾವಿಕರಿಗೆ ಸಹಾಯಕವಾದವು.
2. ಪೂರ್ವ ದೇಶಗಳ ಸಂಪತ್ತಿನ ಬಗ್ಗೆ ಹೇಳಲಾಗುತ್ತಿದ್ದ ಕಥೆಗಳು
3. ಧರ್ಮ ಪ್ರಚಾರಕ್ಕಾಗಿ ಉತ್ಸುಕರಾಗಿದ್ದ ಮಿಷನರಿಗಳು
4. 1453 ರಲ್ಲಿ ಆಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲನ್ನು ವಶಪಡಿಸಿಕೊಂಡದ್ದು.

ಈ ಅಂಶಗಳು ಭಾರತಕ್ಕೆ ಪರ್ಯಾಯ ಮಾರ್ಗ ಕಂಡುಹಿಡಿಯಲು ಪ್ರೇರಣೆ ನೀಡಿದವು.

# ಭಾರತಕ್ಕೆ ಬಂದ ಯೂರೋಪಿಯನ್ನರು:

- ಪೋರ್ಚುಗೀಸರು
- ಡಚ್ಚರು
- ಬ್ರಿಟೀಷರು
- ಫ್ರೆಂಚರು



# ಪೋರ್ಚುಗೀಸರು:

ಪೋರ್ಚುಗೀಸ್ ನಾವಿಕ **ವಾಸ್ಕೋಡಗಾಮ** ಕ್ರಿ.ಶ. **1498** ರಲ್ಲಿ □

**ಕಲ್ಲಿಕೋಟೆಗೆ** ಬಂ

o edit Master te

nd level

level

rth level

Fifth level









17 ನೇ ಶತಮಾನದವರೆಗೂ ಅರೇಬಿಯನ್ ಸಮುದ್ರದ ಮೇಲೆ **ಪೋರ್ಚುಗೀಸರು** ಏಕಸ್ವಾಮ್ಯತೆಯನ್ನು ಹೊಂದಿದ್ದರು. ನಂತರ ಇಂಗ್ಲೀಷರ ಹಾಗೂ ಡಚ್ಚರ ಆಗಮನದಿಂದಾಗಿ ಪೋರ್ಚುಗೀಸರ

# ಬ್ರಿಟೀಷರು:



- ಸ್ಥಳೀಯ ದೊರೆಗಳು ಹಾಗೂ ಮೊಘಲ್ ಚಕ್ರವರ್ತಿಗಳಿಂದ ವ್ಯಾಪಾರ ಅನುಮತಿ ಪಡೆದರು. ಮೊದಮೊದಲು ಬ್ರಿಟೀಷರು ಹಾಗೂ ಭಾರತೀಯರ ವ್ಯಾಪಾರ ಪರಸ್ಪರ ಅನುಕೂಲಕ್ಕಾಗಿತ್ತು.
- 17–18 ನೇ ಶತಮಾನದ ಹೊತ್ತಿಗೆ ಪೋರ್ಚುಗೀಸರು ಹಾಗೂ ಡಚ್ಚರ ವಿರದ್ದ ಜಯಗಳಿಸಿದ ಬ್ರಟೀಷರು ವ್ಯಾಪಾರದ ಏಕಸ್ವಾಮ್ಯ ಪಡೆದುಕೊಂಡರು.
- ಮೊಘಲ್ ಚಕ್ರವರ್ತಿ ಫರೂಕ್ ನಿಂದ ಕಲ್ಕತ್ತಾದ ಸಮೀಪ ಕೆಲವು ಹಳ್ಳಿಗಳನ್ನು ಬ್ರಿಟೀಷರಿಗೆ ದತ್ತಿ ನೀಡಿದ
- ಕ್ರಮೇಣ ಮದ್ರಾಸ್ ಹಾಗೂ ಮುಂಬೈನಲ್ಲೂ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡರು.
- ಮದ್ರಾಸ್, ಕಲ್ಕತ್ತಾ ಮತ್ತು ಮುಂಬೈ ನ ಮೂಲ ಮೀನುಗಾರರ ಹಳ್ಳಿಗಳೇ ನಂತರ ಬ್ರಿಟೀಷರ ಆಡಳಿತ ಕೇಂದ್ರ (ಪ್ರೆಸಿಡೆನ್ಸಿ) ಗಳಾದವು. ಇವುಗಳ ಸುತ್ತ ಕೋಟೆಗಳನ್ನೂ ಕಟ್ಟಿಕೊಂಡರು.




ಬ್ರಿಟೀಷರು ಬ್ರೀಟೀಷ್ ಈಸ್ಟ್ ಇಂಡಿಯಾ ಕಂಪನಿಯ ಮೂಲಕ ತಮ್ಮ ವ್ಯಾಪಾರ, ವಾಣಿಜ್ಯ ಹಾಗೂ ರಾಜಕಾರಣವನ್ನು ವಿಸ್ತರಿಸಿಕೊಂಡರು.

- 18 ನೇ ಶತಮಾನದ ಮೊದಲಾರ್ಧದ ಹೊತ್ತಿಗೆ ಮೊಘಲ್ ಸಾಮ್ರಾಜ್ಯವು ಪತನದ ಹಾದಿಹಿಡಿಯಿತು.
- ಈ ಸಮಯದಲ್ಲೇ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ತನ್ನ ವ್ಯಾಪಾರವನ್ನು ಸಂರಕ್ಷಿಸಲು ತನ್ನದೇ ಆದ ಸೈನ್ಯವನ್ನು ಕಟ್ಟಿಕೊಂಡಿತು.
- ಮೊಘಲರ ಹಿಡಿತದಿಂದ ತಪ್ಪಿಸಿಕೊಂಡ ಬಂಗಾಳ, ಔದ್, ಹೈದರಾಬಾದ್ ಮತ್ತು ಮರಾಠ ಸಂಸ್ಥಾನಗಳು ತಮ್ಮ ಸ್ವಾರ್ಥಕ್ಕಾಗಿ ಈ ವಿದೇಶಿ ಸೈನ್ಯದ ಬೆಂಬಲ ಪಡೆಯಲು ಮುಂದಾದವು.
- ಕಾಲಕ್ರಮೇಣ ಬ್ರಿಟಿಷರು ತಮ್ಮ ಸೈನ್ಯ, ರಾಜಕೀಯ ಮುತ್ಸದ್ದಿತನ ಹಾಗೂ ಕುಟಿಲತೆಯಿಂದ ಸಾಮ್ರಾಜ್ಯದೊಡೆಯರಾಗುತ್ತಾ ಬಂದರು.

## ಫ್ರೆಂಚರು:

## ಕರ್ನಾಟಿಕ್ ಯುದ್ದಗಳು:

ಬ್ರಿಟೀಷರು ಹಾಗೂ ಫ್ರೆಂಚರ ನಡುವೆ ನಡೆದವು.






## ಮೊದಲನೇ ಕರ್ನಾಟಿಕ್ ಯುದ್ಧ:

- ಬ್ರಿಟೀಷರು ಹಾಗೂ ಫ್ರೆಂಚರ ನಡುವೆ ನಡೆಯಿತು.
- ಕರ್ನಾಟಿಕ್ ಪ್ರದೇಶದ ನವಾಬ ಅನ್ವರುದ್ದೀನ್‌ನನ್ನು ಬ್ರಿಟೀಷರು ದಾಳವಾಗಿ ಬಳಸಿಕೊಂಡರು
- ಫ್ರೆಂಚರು ಮದ್ರಾಸನ್ನು ವಶಪಡಿಸಿಕೊಂಡರು
- ನಂತರ ಆದ ಒಪ್ಪಂದದ ಮೂಲಕ ಫ್ರೆಂಚರು ಮದ್ರಾಸನ್ನು ಪುನಃ ಬ್ರಿಟೀಷರಿಗೆ ಹಿಂತಿರುಗಿಸಿದರು.

# ಎರಡನೇ ಕರ್ನಾಟಿಕ್ ಯುದ್ಧ:

- ದಖನ್‌ನಲ್ಲಿ ಹೈದರಾಬಾದಿನ ಸಿಂಹಾಸನ ಹಾಗೂ ಕರ್ನಾಟಿಕ್‌ನ ಸಿಂಹಾಸನಕ್ಕಾಗಿ ನಡೆದ ಸೆಣಸಾಟವೇ ಪ್ರಮುಖ ಕಾರಣ. ಇದೇ ಕಾರಣದಿಂದಾಗಿ ಬ್ರಿಟೀಷರು ಹಾಗೂ ಫ್ರೆಂಚರು ಹಸ್ತಕ್ಷೇಪ ಮಾಡಿದರು.

ಕರ್ನಾಟಿಕ್‌ನಲ್ಲಿ

ಅನ್ವರುದ್ದೀನ್

ಚಂದಾಸಾಹೇಬ್

# ಹೈದರಾಬಾದ್‌ನಲ್ಲಿ

ನಾಸಿರ್‌ಜಂಗ್ | ಮುಸಾಫರ್ ಜಂಗ್

ಆದರೂ ದಖನ್ ಮೇಲಿನ ಫ್ರೆಂಚರ ಪ್ರಭಾವ ಕಡಿಮೆಯಾಯಿತು.

# ಮೂರನೇ ಕರ್ನಾಟಿಕ್ ಯುದ್ಧ:

ಕಾರಣ: ಫ್ರೆಂಚರು ಮದ್ರಾಸಿನ ಸೇಂಟ್ ಜಾರ್ಜ್ ಕೋಟೆಯನ್ನು ವಶಪಡಿಸಿಕೊಂಡು ಮದ್ರಾಸಿನ ಮೇಲೆ ದಾಳಿಮಾಡಲು ಹವಣಿಸಿ ವಿಫಲರಾದರು.




ಬ್ರಿಟೀಷರ ಸರ್ ಐರ್ ಕೂಟನು

ವಾಂಡಿವಾಷ್ ಕದನದಲ್ಲಿ ಫ್ರೆಂಚರನ್ನು ಸೋಲಿಸಿದನು.

ಪರಿಣಾಮಗಳು:

1. ಫ್ರೆಂಚರು ಭಾರತದಲ್ಲಿ ಬಹುತೇಕ ತಮ್ಮ ಎಲ್ಲಾ ಅಧಿಕಾರವನ್ನುಕಳೆದುಕೊಂಡರು.
2. ಮುಂದೆ ಆದ ಒಪ್ಪಂದದ ಪ್ರಕಾರ ಬ್ರಿಟೀಷರು ತಮ್ಮ ಎಲ್ಲಾ ಬಳುವಳಿಗಳನ್ನು ಹಿಂದಿರುಗಿಸಿದರು. ಆದರೂ
3. ಫ್ರೆಂಚರು ಇನ್ನು ಮುಂದೆ ಕೋಟೆಗಳನ್ನು ಕಟ್ಟಿಕೊಂಡು ರಕ್ಷಿಸಿಕೊಳ್ಳುವಂತಿರಲಿಲ್ಲ.
4. ಅವು ಕೇವಲ ವ್ಯಾಪಾರಿ ಕೇಂದ್ರವಾಗಿಯಷ್ಟೆ ಕಾರ್ಯನಿರ್ವಹಿಸಬೇಕಿತ್ತು.

## ಕರ್ನಾಟಕ ಯುದ್ದಗಳು ಇಂಗ್ಲೀಷರು ಭಾರತದಲ್ಲಿ ನೆಲೆಯೂರಲು ಹೇಗೆ ಸಹಾಯಕವಾದವು ಎಂಬುದನ್ನು ವಿವರಿಸಿ.

1. ಮೊದಲ ಕರ್ನಾಟಿಕ್ ಯುದ್ದದಲ್ಲಿ ಬ್ರಿಟೀಷರು ನವಾಬ ಅನ್ವರುದ್ದಿನ್‌ನನ್ನು ದಾಳವಾಗಿ ಬಳಸಿಕೊಂಡರು.

2. ಎರಡನೇ ಕರ್ನಾಟಿಕ್ ಯುದ್ದದಲ್ಲಿ ರಾಬರ್ಟ್‌ಕ್ಲೈವ್ ಆರ್ಕಾಟಿನ ಮೇಲೆ ದಾಳಿ ಮಾಡಿ ತಿರುಚನಾಪಳ್ಳಿಯನ್ನು ಸುತ್ತುವರೆದು ಫ್ರೆಂಚರ ಬಂಬಲಿಗನಾಗಿದ್ದ ಚಂದಾಸಾಹೇಬನನ್ನು ಕೊಂದನು. ಇದರಿಂದಾಗಿ ಕರ್ನಾಟಿಕ್ ಪ್ರದೇಶವು ಪರೋಕ್ಷವಾಗಿ ಬ್ರಿಟೀಷರ ವಶವಾಯಿತು.

3. ಮೂರನೇ ಕರ್ನಾಟಿಕ್ ಯುದ್ದದ ಸಂದರ್ಭದಲ್ಲಿ ನಡೆದ ವಾಂಡಿವಾಷ್ ಕದನದಲ್ಲಿ ಬ್ರಿಟೀಷರ ಸರ್ ಐರ್ ಕೂಟ್‌ನು ಫ್ರೆಂಚರನ್ನು ಸಂಪೂರ್ಣವಾಗಿ ಸೋಲಿಸಿದ್ದು ಭಾರತದಲ್ಲಿ ಭದ್ರವಾಗಿ ನೆಲೆಯೂರಲು ಸಹಾಯಕವಾಯಿತು.

# ಪ್ಲಾಸಿ ಕದನ: 1757

## ಕಾರಣ:

ಬಂಗಾಳದ ಮೇಲಿನ ಆಧಿಪತ್ಯ ಉಳಿಸಿಕೊಳ್ಳಲು ಬಂಗಾಳದ ನವಾಬ ಸಿರಾಜುದ್ದೌಲನು ಬ್ರಿಟೀಷರ ವಿರುದ್ದ ಯುದ್ದ ಘೋಷಣೆ ಮಾಡಿದ್ದು.

## ಕಪ್ಪು ಕೋಣೆ ದುರಂತ

ಬಂಗಾಳದ ನವಾಬ ಸಿರಾಜುದ್‌ದೌಲನು 1756 ರಲ್ಲಿ ಕಾಸಿಂಬಜಾರ್ ಮೇಲೆ ದಾಳಿ ಮಾಡಿ ಕಲ್ಕತ್ತಾದ ಡೇವಿಡ್ ಕೋಟೆಯನ್ನು ವಶಪಡಿಸಿಕೊಂಡನು. ಈ ದಾಳಿಯ ಸಂದರ್ಭದಲ್ಲಿ ಸೆರೆಹಿಡಿದ ಬ್ರಿಟಿಷ್ ಸೈನಿಕರನ್ನು ಕಿರಿದಾದ ಕೋಣೆಯಲ್ಲಿ ಶಿಕ್ಷೆಗಾಗಿ ಕೂಡಿಟ್ಟನು. ಇಲ್ಲಿದ್ದ 146 ಸೈನಿಕರಲ್ಲಿ 123 ಜನರು ಮರಣ ಹೊಂದಿದರು. ಇದನ್ನೇ ಕಪ್ಪು ಕೋಣೆ ದುರಂತ ಎನ್ನಲಾಗಿದೆ.

ಸಿ X ಂಟ್







## ಪ್ಲಾಸಿ ಕದನದ ಫಲಿತಾಂಶ/ಪರಿಣಾಮ:

## (ಪ್ಲಾಸಿ ಕದನದ ಫಲಿತಾಂಶಗಳೇನು ?)

1. ಕ್ರಿ.ಶ. 1757 ರಲ್ಲಿ ನಿರ್ಣಾಯಕ ಯುದ್ಧದಲ್ಲಿ ಸಿರಾಜುದ್ದೌಲನು ಸೋತನು.

2. ಬ್ರಿಟೀಷರಿಗೆ ಸಹಕರಿಸಿದ ಮೀರ್ ಜಾಫರ್ ಬಂಗಾಳದ ನವಾಬನಾದ

3. ಬ್ರಿಟೀಷರು ಮೀರ್ ಜಾಫರ್‌ನಿಂದ 24 ಪರಗಣಗಳನ್ನು ಪಡೆದರು.

4. ಬ್ರಿಟಿಷರು ಅವುಗಳ ಮೇಲೆ ಜಮೀನುದಾರಿ ಹಕ್ಕನ್ನು ಪಡೆದುಕೊಂಡು ಅತ್ಯಂತ ಪ್ರಬಲರಾದರು.

ನಂತರ ಮೀರ್ ಜಾಫರ್‌ನನ್ನು ಪದಚ್ಯುತಿಗೊಳಿಸಿ ಮೀರ್‌ಖಾಸಿಂ ನನ್ನು ನವಾಬನನ್ನಾಗಿ ಮಾಡಿದರು. ಇದಕ್ಕೆ ಪ್ರತಿಯಾಗಿ ಬ್ರಿಟೀಷರಿಗೆ ಬರ್ದವಾನ, ಮಿಡ್ನಾಪುರ ಮತ್ತು ಚಿತ್ತಗಾಂಗ್ ಪ್ರದೇಶಗಳನ್ನು ಬಳುವಳಿಯಾಗಿ ನೀಡಿದನು.

ನಂತರ ಮೀರ್ ಖಾಸಿಂ ಕೂಡ ಬ್ರಿಟೀಷರ ಹಿಡಿತದಿಂದ ಹೊರಬರಲು ಪ್ರಂಯತ್ನಿಸಿದಾಗ ಅವನನ್ನೂ ಪದಚ್ಯುತಿಗೊಳಿಸಿ ಮತ್ತೆ ಮೀರ್ ಜಾಫರ್‌ನನ್ನು ಮತ್ತೆ ನವಾಬನನ್ನಾಗಿ ಮಾಡಿದರು.

## ಬಕ್ಸಾರ್ ಕದನ ( 1764 )

**ಕಾರಣ:** ಮೀರ್ ಖಾಸಿಂ ಪದಚ್ಯುತಿ

ಬ್ರಿಟಿಷರ ವಿರುದ್ಧ ಮೊಘಲರ ಷಾ ಆಲಂ + ಔದ್‌ನ ನವಾಬ ಷೂಜ್ ಉದ್ ದೌಲ್ + ಮೀರ್ ಖಾಸಿಂ – ಸೋತರು.

## ಬಕ್ಸಾರ್ ಕದನದ ಪರಿಣಾಮಗಳು (ಫಲಿತಾಂಶಗಳು):

- ಬಿಹಾರ, ಒರಿಸ್ಸಾ ಮತ್ತು ಬಂಗಾಳ ಪ್ರಾಂತ್ಯಗಳು ಬ್ರಿಟಿಷರ ವಶವಾದವು.
- ಮೊಘಲ್ ಚಕ್ರವರ್ತಿ ಷಾ ಆಲಂ ದಿವಾನಿ ಹಕ್ಕನ್ನು ( ಭೂ ಕಂದಾಯ ವಸೂಲಿ ಮಾಡುವ ಹಕ್ಕು ) ಬ್ರಿಟಿಷರಿಗೆ ನೀಡಿದನು
- ರಾಬರ್ಟ್‌ಕ್ಲೈವ್ ಬಂಗಾಳದಲ್ಲಿ ದ್ವಿಮುಖ ಸರ್ಕಾರ ಜಾರಿಗೆ ತಂದನು.
- ಭಾರತದಲ್ಲಿ ತಮ್ಮ ಆಧಿಪತ್ಯ ಸ್ಥಾಪಿಸಲು ಆರಂಭಿಸಿದರು.

### ದ್ವಿಮುಖ ಸರ್ಕಾರ ಎಂದರೇನು?

- ದ್ವಿಮುಖ ಸರ್ಕಾರ ಎಂದರೆ

  ಬ್ರಿಟೀಷರು ಹಾಗೂ ನವಾಬನ ನಡುವೆ □ಅಧಿಕಾರದ ವಿಭಜನೆ□

| ಬ್ರಿಟೀಷರು | ನವಾಬ |
|---|---|
| ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಬ್ರಿಟಿಷರು ಪಡೆದರು | ಆ[illegible]ಳಿತ ನ್ಯಾಯ ಪ್ರತಿಪಾದನೆಯಂತಹ ಆಡಳಿತಾತ್ಮಕ ಕ[illegible]ರ್ಯಗಳನ್ನು ನವಾಬ ನಿರ್ವಹಿಸುತ್ತಿದ್ದನು. |

# ನಿಮಗಿದು ತಿಳಿದಿರಲಿ:

ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ (ಇಂಗ್ಲೆಂಡ್) □ 1600

ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ ನೆದರ್‌ಲ್ಯಾಂಡ್ □ 1602

ಇಂಗ್ಲೀಷರು ತಮ್ಮ ಮೊದಲ ವ್ಯಾಪಾರಿ ಕೋಠಿ ಸ್ಥಾಪನೆ (ಮದ್ರಾಸ್)–1639

ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆ □ 1664



# ರಾಬರ್ಟ್ ಕ್ಲೈವ್:

ಬ್ರಿಟಿಷ್‌ಭಾರತದ ಸೃಷ್ಠಿಗೆ ಕಾರಣಕರ್ತ  ಈಸ್ಟ್ ಇಂಡಿಯಾ ಕಂಪನಿ ಯಲ್ಲಿ ಗುಮಾಸ್ತ – ಆರ್ಕಾಟ್ ಮುತ್ತಿಗೆಯಲ್ಲಿ , ಪ್ಲಾಸಿ ಕದನ, ಬಕ್ಸಾರ್ ಕದನದಲ್ಲಿ ಮುಖ್ಯ ಪಾತ್ರ ವಹಿಸಿ ದಕ್ಷಿಣಭಾರತ ಹಾಗೂ ಬಂಗಾಳ ವಿಜಯಕ್ಕೂ ಕಾರಣನಾದ . ಇದರಿಂದ ತನ್ನ ಹಾಗೂ ಕಂಪನಿಯ ಲಾಭಕ್ಕೂ ಕಾರಣನಾದ. ನಂತರ ಇಂಗ್ಲೆಂಡ್ ಸಂಸತ್ತಿನ ಸದಸ್ಯನಾಗಿ ನೇಮಕಗೊಂಡು ಬ್ರಿಟನ್ ಗೆ ಹಿಂದಿರುಗಿದ. ನಂತರ ಕಂಪನಿ ನಷ್ಟಕ್ಕೊಳಗಾಯಿತು. ಇದರಿಂದ ಮತ್ತೆ ಅವನನ್ನು ಭಾರತಕ್ಕೆ ಸೇನಾಪತಿಯನ್ನಾಗಿ ಕಳುಹಿಸಿತು. ಆಗ ಬಕ್ಸಾರ ಕದನದಲ್ಲಿ ವಿಜಯಿಯಾಗಿ ದಿವಾನಿ ಹಕ್ಕನ್ನು ಪಡೆದು ಕಂಪನಿಗೆ ಅಪಾರ ಲಾಭ ತಂದುಕೊಟ್ಟು 1767 ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದ.

## ಡೂಪ್ಲೆ:




ಫ್ರೆಂಚರ ಗರರ್ನರ್. ಭಾರತದಲ್ಲಿ ಫ್ರೆಂಚ್ ಸಾಮ್ರಾಜ
ಸ್ಥಾಪಿಸಬೇಕೆಂಬ ಮಹತ್ವಕಾಂಕ್ಷೆಯುಳ್ಳವನು.

ದೇಶೀ ರಾಜರುಗಳ ಜೊತೆ ಒಪ್ಪಂದ ಮಾಡಿಕೊಂಡನು.

ಡೂಪ್ಲೆಯ ಸೇನೆಯಿಂದಲೇ ಹೈದರಾಲಿ ಸಹ ತರಬೇತಿ ಪಡೆದಿದ್ದನು. ದಖನ್ ಹಾಗೂ ಕರ್ನಾಟಿಕ್ ಮೇಲಿನ ಆಧಿಪತ್ಯಕ್ಕಾಗಿ ಬ್ರಿಟಿಷರು ಹಾಗೂ ಫ್ರೆಂಚರ ನಡುವೆ ಸಂಘರ್ಷದಲ್ಲಿ ಡೂಪ್ಲೆ ಮುಖ್ಯ ಪಾತ್ರವಹಿಸಿದನು.

1746 ರ ಮದ್ರಾಸ್ ಕದನದಲ್ಲಿ ಮುಖ್ಯ ಪಾತ್ರವಹಿಸಿದನು.

ನಂತರ ಫ್ರಾನ್ಸಿನ ಸರ್ಕಾರವೇ ಶಾಂತಿಯನ್ನು ಬಯಸಿ ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡಿತು.